ವಿಷಯ : ತುಂಗಾ ಮೇಲ್ದಂಡೆ ಯೋಜನೆಗೆ ಖರ್ಚು ಮಾಡಿರುವ ಹಣ

1493 (2979)-ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ತುಂಗಾ ಮೇಲ್ದಂಡೆ ಯೋಜನೆಗೆ ಈವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ? ಸದರಿ ಯೋಜನೆಯ ಪ್ರಗತಿ ಈಗ ಯಾವ ಹಂತದಲ್ಲಿದೆ?

2. ಸದರಿ ಯೋಜನೆಯ ಕೆಲಸವು ಇನ್ನೂ ಎಷ್ಟು ದಿವಸಗಳಲ್ಲಿ ಮುಗಿಸಲಾಗುವುದು? ಇದಕ್ಕೆಬೇಕಾದ ಅಂದಾಜು ಪಟ್ಟಿ ಮತ್ತು ನಕ್ಷೆಯ ಪ್ರಕಾರ ಎಷ್ಟು ಹಣ ಬೇಕಾಗುವುದು?

3) ಸದರಿ ಯೋಜನೆಯು ಅಭಿವೃದ್ಧಿ ಕುರಿತು ಆಂಧ್ರ ಸರ್ಕಾರದವರು ತಕರಾರು ತೆಗೆದಿದ್ದು ಈ ಬಗ್ಗೆ ಕರ್ನಾಟಕ ಸರ್ಕಾರದವರ ನಿಲುವು ಏನು?

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು)

1) ತುಂಗಾ ಮೇಲ್ದಂಡೆ ಯೋಜನೆಗೆ ಈವರೆಗೆ (ಪ್ರಾರಂಭದಿಂದ ಜೂನ್ 97ರವರೆಗೆ) ರೂ. 1860.66ಲಕ್ಷ ಖರ್ಚು ಮಾಡಲಾಗಿದೆ. ಸದರಿ ಯೋಜನೆಯು ಪ್ರಾರಂಭಿಕ ಹಂತದಲ್ಲಿದೆ. ಆಣೆಕಟ್ಟಿನ ವಿನ್ಯಾಸಗಳನ್ನು ತಯಾರಿಸಲಾಗುತ್ತಿದೆ. 4 ಮೀ. ಉದ್ದಕ್ಕೆ ನಾಲಾ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಕಟ್ಟಡ ಹಾಗೂ ನೀರಾವರಿ ಕಾಲೋನಿಗಳ ನಿರ್ಮಾಣ ಇವುಗಳ ಪ್ರಗತಿಯಲ್ಲಿವೆ. 102ನೇ ಕಿ.ಮೀ.ವರೆಗೆ ನಾಲಾ ಪಂಕ್ತೀಕರಣ ಅನುಮೋದಿಸಲ್ಪಟ್ಟಿದೆ.

2) ತುಂಗಾ ಮೇಲ್ದಂಡೆ ಯೋಜನೆಯನ್ನು 200-ನೇ ಇಸವಿಯೊಳಗೆ ಪೂರ್ಣಗೊಳಿಸಲು ಜರೂರು (ಕ್ರಿಟಿಕಲ್) ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 1996-97ನೇ ಸಾಲಿನ ದರಸೂಚಿಯನ್ವಯ ಅಂದಾಜು ಮಾಡಲಾದಂತೆ ಈ ಯೋಜನೆಗೆ ಸುಮಾರು ರೂ. 670.00 ಕೋಟಿ ಹಣ ಬೇಕಾಗುವುದು.

3) ಸದರಿ ಯೋಜನೆಯನ್ನು ಬಚಾವತ್ ತೀರ್ಪಿನ ಚೌಕಟ್ಟಿನಲ್ಲಿಯೇ ತೆಗೆದುಕೊಳ್ಳಲಾಗಿರುವುದರಿಂದ ಇದರ ಬಗ್ಗೆ ಸದರಿ ತೀರ್ಪಿನ ಉಲ್ಲಂಘನೆ ಯಾಗುವುದಿಲ್ಲರೆಂದು ಆಂಧ್ರ ಸರ್ಕಾರಕ್ಕೆ ಸ್ಪಷ್ಟೀಕರಿಸಲಾಗಿದೆ.